ಪ್ರಮಾಣ ವಚನ ಬೋಧಿಸಿದ ದಿನಾಂಕ:**05.08.2026**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಜೆ.ಕೆ. ವಕೀಲರಿಂದ**

ನಾನು ಮರಳೇನಹಳ್ಳಿಯಲ್ಲಿ ವಾಸಮಾಡುತ್ತಿದ್ದೇನೆ. ನಮ್ಮ ಆಸ್ತಿಯು ಅಣಬೇ ಗ್ರಾಮಕ್ಕೆ ಸೇರಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮರಳೇನಹಳ್ಳಿ ಮತ್ತು ಅಣಬೇ ಗ್ರಾಮ ಅಕ್ಕಪಕ್ಕದಲ್ಲಿದೆ ಎಂದು ಹೇಳುತ್ತಾರೆ. ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ಯಾವ ಉದ್ದೇಶಕ್ಕಾಗಿ ಹಾಕಿದ್ದಾರೆಂದರೆ ಗೊತ್ತಿಲ್ಲ. ಸರ್ವೆ ನಂ.**60/4** ರ ಆಸ್ತಿಗೆ ಸಂಬಂಂಧಿಸಿದಂತೆ ಈ ಕೇಸನ್ನು ಹಾಕಲಾಗಿದೆ. ದಾವಾ ಆಸ್ತಿಯ ವಿಸ್ತೀರ್ಣ **1** ಎಕರೆ **33** ಗುಂಟೆ. ಈಗ ದಾವಾ ಆಸ್ತಿಯ ಖಾತೆಯು ಈಗ ಯಾರ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. ವಾದಿ – ರಾಜಣ್ಣನವರ ತಂದೆಯ ಹೆಸರು ಹನುಮಂತರಾಯಪ್ಪ. ರಾಜಣ್ಣನವರ ಸ್ವಂತ ತಂದೆಯ ಹೆಸರು ಮುನಿಶಾಮಯ್ಯ. ಮುನಿಶಾಮಯ್ಯನವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಮುನಿಶಾಮಯ್ಯನವರ ತಂದೆಯ ಹೆಸರು ಹನುಮಂತಣ್ಣ ಎಂದರೆ ಗೊತ್ತಿಲ್ಲ. ಹನುಮಂತಣ್ಣನವರಿಗೆ ಹನುಮಂತರಾಯ ಎಂಬ ತಮ್ಮನಿದ್ದನು ಎಂದರೆ ಗೊತ್ತಿಲ್ಲ.

ದಾವಾ ಆಸ್ತಿಗೂ ನಮ್ಮ ಆಸ್ತಿಗೂ ಸುಮಾರು **2** ಕಿ.ಮೀ ದೂರ ಆಗುತ್ತದೆ ಎಂದರೆ ಸರಿಯಲ್ಲ. ಆದರೆ ಅರ್ಧ ಕಿ.ಮೀ ದೂರವಾಗುತ್ತದೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಪ್ರಮಾಣಪತ್ರಕ್ಕೆ ಮಾಹಿತಿ ಕೊಟ್ಟಿದ್ದೇನೆ. ದಾವಾ ಆಸ್ತಿಯು ಈ ಹಿಂದೆ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿಯು ಹನುಮಂತರಾಯಪ್ಪನವರ ಹೆಸರಿನಲ್ಲಿ ಖಾತೆ ಇತ್ತು ಎಂದು ಹೇಳುತ್ತಾರೆ. **1970** ರಿಂದ **1992** ರವರೆಗೂ ಹನುಮಂತಣ್ಣ ಬಿನ್ ಹುಚ್ಚಯ್ಯನವರ ಹೆಸರಿನಲ್ಲಿ ದಾವಾ ಆಸ್ತಿಯ ಖಾತೆಯು ಬರುತ್ತಿದೆ ಎಂದರೆ ಗೊತ್ತಿಲ್ಲ. **1975** ರಲ್ಲಿ ವಾದಿ ಮತ್ತು **1** ನೇ ಪ್ರತಿವಾದಿಯ ನಡುವೆ ಆದ ವಿಭಾಗ ಪತ್ರದ ಆಧಾರದ

ಮೇಲೆ **1** ನೇ ಪ್ರತಿವಾದಿಯ ಹೆಸರಿಗೆ **1992** ರಿಂದ ಖಾತೆಯಾಗಿದೆ ಎಂದರೆ ಗೊತ್ತಿಲ್ಲ. ದಿನಾಂಕ:**28.09.2017** ರಲ್ಲಿ **1** ನೇ ಪ್ರತಿವಾದಿಯು ದಾವಾ ಆಸ್ತಿಯನ್ನು **2** ನೇ ಪ್ರತಿವಾದಿಗೆ ದಾನ ಮಾಡಿದ್ದಾರೆಂದರೆ ಗೊತ್ತಿಲ್ಲ. **2017** ರಿಂದ ಇಲ್ಲಿಯ ತನಕ ದಾವಾ ಆಸ್ತಿಯ ಖಾತೆಯು **2** ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಗೊತ್ತಿಲ್ಲ.

**2021** ರಲ್ಲಿ ಪ್ರತಿವಾದಿಗಳು ನೀಲಗಿರಿ ಕಟಾವು ಮಾಡುವಾಗ ತೊಂದರೆ ಕೊಡುತ್ತಿದ್ದಾರೆಂದು ಪೊಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಅದಕ್ಕೂ ಪೂರ್ವದಲ್ಲಿ ತಹಶೀಲ್ದಾರ್‌ರವರು ಅಂತರ್ಜಲ ಕುಸಿಯುತ್ತಿದೆ ಎಂದು ಪ್ರತಿವಾದಿಗಳಿಗೆ ನೀಲಗಿರಿ ಮರಗಳನ್ನು ತೆರವು ಮಾಡಲು ನೋಟೀಸ್ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಪ್ರತಿವಾದಿಗಳೇ ದಾವಾ ಆಸ್ತಿಯ ಸ್ವಾಧೀನ ಹೊಂದಿರುವ ಕಾರಣ ಮತ್ತು ಅವರ ಹೆಸರಿನಲ್ಲೇ ಖಾತೆ ಇರುವ ಕಾರಣ ತಹಸೀಲ್ದಾರ್‌ರವರು ಪ್ರತಿವಾದಿಗಳಿಗೆ ನೋಟೀಸನ್ನು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ದಿನಾಂಕ:**31.08.1984** ರ ಕ್ರಯಪತ್ರವನ್ನು ನೋಡಿದ್ದೀರಾ? ಎಂದರೆ ಇಲ್ಲ. ಸದರಿ ಕ್ರಯಪತ್ರದ ಅಡಿಯಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿಲ್ಲ ಎಂದರೆ ಗೊತ್ತಿಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.